5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಿರ್ವಹಿಸುವ ಅಥವಾ ಜವಾಬಿನಲ್ಲಿ ಇನಗೆ ಹಕ್ಕು ಇಟ್ಟಿಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂಪಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಶರ್ಸರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯುವಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ಡೆಪ್ಯುಟಿ ಕಮಿಷನರವರು ಖಾಯಂಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪ್ಪಸೀಲ್‌ನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಆಗಾಪ್ತುತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ.	ಜೋಡೀದಾರರ ಹೆಸರು	ಅಂದಾಜು ಬೀಜವರಿ ರೂ. ಆ. ಪೈ.	ಅಂದಾಜು ಹುಟ್ಟುವ ಬೀಜವರಿ ರೂ. ಆ. ಪೈ.	ಸಾಲಿಯಾನಾ ಸರಕಾರಕ್ಕೆ ಕಿಸ್ತಿಗೊಜಬೇಕಾದ ಕಿಸ್ತಿ ರೂ. ಆ. ಪೈ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜು ಮಾಡಲ್ಪಡತ್ತೋ ಅಂತಾ ಸರಕಾರದ ಕಂಪಾಯದ ಬಾಕಿ ರೂ. ಆ. ಪೈ.	ಹರಾಜು ತಾರೀಖು
ಹಾಸನ	ಅರಸೀಕೆರೆ ತಾಲ್ಲೂಕು	ಕೆಂದೂರು	ಜೋಡಿ ಸನಿಸೋಗೆ	ನಾರಣಾಚಾರಿ ದಾಸ್ಯರೆ 18 ಜನರು	ಪರಂಪೋಕು 331 32 ಖುಷ್ಕಿ ... 139 23 ತರಿ .. 140 24 ಬಾಗಾಯತು 0 23 ಜುಮ್ಲಾ .. 612 22	5 4 95 8 418 4 2 0 521 0	ಲೋಕಲ್ ಸೆಸ್ಸು ಕೇರಿ 278 9 0	343 3 9	1907ನೇ ಇಸ್ವಿ ಮಾರ್ಚಿ ತಾ 18ನೇ ಸೋಮವಾರ ಪದಿನೈದು ಘಂಟೆಲು" ಕೆಂದೂರು ಕಛೇರಿಯ ಮುಂದೆ ಈ ಹಾಸನ ಡಿಸ್ಟ್ರಿಕ್ಟಿನ ಅರಸೀಕೆರೆ ತಾಲ್ಲೂಕಿನ ಕೆಂದೂರು ಹೋಬಳಿಯ ಜೋಡಿ ಸನಿಸೋಗೆ ಗ್ರಾಮವು ಹರಾಜು ನಡಿಸುತ್ತಾರೆ.

ಷರಾ—ಜೋಡೀದಾರರುಗಳಿಂದಲಾಗಲಿ ಯಾ ಖಾಯಂಗುತ್ತಾದಾರರುಗಳಿಂದ ಆಗಲಿ ಖಾಸ್ತೆ ಮೂಲಕ ಇವರುಗಳಿಗೆ ಹಿಂದೆಯಿದ್ದವರಿಂದಾಗಲಿ ಉಂಟು ಮಾಡಲ್ಪಟ್ಟ ತಪಾಸಿ ಹಿಡುವಳಿಗಾಗಲಿ ಮತ್ಯಾವ ಸಂಬಂಧಗಳಿಗಾಗಲಿ ಸದರಿ ಹರಾಜು ಬಳಪಟ್ಟಿರುವದಿಲ್ಲ.

ಎಂ. ಎ. ನಾರಾಯಣಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.
ಇಸ್ತಿಹಾರ್.

ತಾರೀಖು 21ನೆ ಜನವರಿ 1907.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟು ತಾರೀಖು 17—4—1867ನೆ ಮತ್ತು 6ನೆ ನಂಬರು ಭೂವಿಯಲ್ಲಿ ಹೂಳಲ್ಪಟ್ಟು ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇವರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದ ತಾಲ್ಲೂಕು ಹುಣಸೆಕೊಪ್ಪದ ಗ್ರಾಮದಲ್ಲಿ ಸರಕಾರಿ ಜಾಗದಲ್ಲಿರುವ ಬಂದು ಹುಣಸೆಮರದ ಬುಡವೆಲ್ಲಿ ಈ ಕೆಳಗೆ ನಮೂದಾಗಿರುವ ಸುಮಾರು 909 ರೂಪಾಯಿ 8 ಆಣೆ ಬೆಲೆ ಉಳ್ಳ ನಿಧಿಯು ತಾರೀಖು 16-9-06ರಲ್ಲಿ ಶಿಕ್ಕಿತು.

ಶಿಕ್ಕಿದ ವಡವೆ.

	ಅಂದಾಜು ಬೆಲೆ. ರೂ. ಆ. ಪೈ.
38 ಚಿನ್ನದ ನಾಣ್ಯಗಳು	338 0 0
ಬಂದು ಭಂಗಾರದ ಸರಿಗೆ	105 0 0

	ರೂ.	ಆ.	ಪೈ.
ಬಂದು ಜೊತೆ ಬ್ಲೌಸು ಬಳೆ ...	48	0	0
ಎರಡು ಭಂಗಾರದ ಹೊನ್ನಾವು ...	12	0	0
ಡಿಟೋ ಡಿಟ್ಟೋ ...	9	0	0
ಬಂದು ಚಿನ್ನದ ಕರಡಿಗೆ	264	0	0
ಬಂದು ಡಿಟೋವಿನ ಭಂಗಾರದ ಪೆಟ್ಟಿಗೆ	10	0	0
ಬಂದು ಭಂಗಾರದ ಚಾವಂತಿಗೆ ಹುವ್ವು	60	0	0
ಬಂದು ಜೊತೆ ಕಾತಾಲಿಗುಂಡು	6	0	0
ಬಂದು ಜೊತೆ ಭಂಗಾರದ ಜಳಕತುಂಬು	9	0	0
ಬಂದು ಜೊತೆ ಭಂಗಾರದ ಕಪ್ಪು	15	0	0
ಬಂದು ಭಂಗಾರದ ಚಾಕ ...	16	0	0
ಬಂದು ಭಂಗಾರದ ವಾಲೆಕಲಕ್ಕ ...	16	0	0
ಬಂದು ಭಂಗಾರದ ಬುಗುಡಿ ಕಲಕ	1	8	0
	909	8	0

2. ಸದರಿ ವಿಸಿಷ್ಟ ನಿಧಿಗೇ ಆಗಲಿ ಅಥವಾ ಅದ್ದರ ಬಂದು ಭಾಗಕ್ಕಾಗಲಿ ಹಕ್ಕುದಾರರೆಲ್ಲರು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಗೆ ಖುದ್ದಾಗಿಯಾಗಲಿ, ವಿಜಂಟರ ಮೂಲಕವಾಗಿಯಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷ್ಣರ ವರ ಆಫೀಸಿನಲ್ಲಿ 1907ನೆ ಇಸವಿ ಆಗಸ್ಟು 3ನೆ ತಾರೀಖು ದಿವಸ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.